ಎ-350 (112)

**ಕರ್ನಾಟಕ ವಿಧಾನ ಪರಿಷತ್ತು**

**ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರ ನಿಯಮ 330 ರ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ಸೂಚನೆ:**

ಧಾರವಾಡ ಪಶ್ಚಿಮ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಹುಬ್ಬಳ್ಳಿ ತಾಲ್ಲೂಕಿನ ತಾರಿಹಾಳದ ರಾಮನಗರದಲ್ಲಿ ಆಶ್ರಯ ಮನೆ ಯೋಜನೆಯಡಿ ನಿರ್ಮಿಸಿರುವ ಸಾವಿರಾರು ಮನೆಗಳು ಸರಿಯಾಗಿ ಹಂಚಿಕೆಯಾಗದೆ ಕಂಡ ಕಂಡವರ ಪಾಲಾಗುತ್ತಿವೆ. ಸರಿ ಪ್ರದೇಶದಲ್ಲಿರುವ ಆಶ್ರಯ ಮನೆಗಳನ್ನು ಇಲ್ಲಿಯವರೆಗೆ ಫಲಾನುಭವಿಗಳಿಗೆ ಸರ್ಕಾರ ಸರಿಯಾಗಿ ಹಂಚದೇ ಇರುವುದರಿಂದ ಬೇಕಾದವರು ಆತಿಕ್ರಮ ಮಾಡಿಕೊಂಡು ತಮ್ಮಿಷ್ಟದಂತೆ ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಸಾವಿರಾರು ಬಡವರು ಸೂರು ಇಲ್ಲದೇ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಹಂಚಿತೆ ಮಾಡುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ತಾರಿಹಾಳದ ರಾಮನಗರದಲ್ಲಿ 2ನೇ ಆಶ್ರಯ ಬಡಾವಣೆಯನ್ನು 2002-2003, 2004 ನೇ ಸಾಲಿನಲ್ಲಿ ರಿ.ಸ.ನಂ: 94/2ಅ, 94/1ಬ, 94/2ಬ2, 94/2ಕ, 94/1ಅ ಕ್ಷೇತ್ರ 33 ಎಕರೆ ಪ್ರದೇಶದಲ್ಲಿ ಒಟ್ಟು 1048 ನಿವೇಶಗಳಲ್ಲಿ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಫಲಾನುಭವಿಗಳಲ್ಲಿ ಹಲವಾರು ಫಲಾನುಭವಿಗಳು ಸದರಿ ಮನೆಗಳಲ್ಲಿ ವಾಸಿಸದೇ ಕೀಲಿ ಹಾಕಿರುವ ಕುರಿತು ಹಾಗೂ ಪರಭಾರೆ ಮಾಡಿರುವ ಕುರಿತು ಮೂಲ ಫಲಾನುಭವಿಗಳನ್ನು ಹೊರತುಪಡಿಸಿ ಬೇರೆಯವರು ವಾಸವಾಗಿರುವ ಕುರಿತು ಪರಿಶೀಲಿಸಲು ಉಪ ವಿಭಾಗಾಧಿಕಾರಿಗಳು ಧಾರವಾಡರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ದಿನಾಂಕ:04.12.2015 ರಂದು ಸರ್ವೆ ಕಾರ್ಯವನ್ನು ಜರುಗಿಸಲಾಗಿದ್ದು, ಸರ್ವೆ ವರದಿ ಈ ಕೆಳಗಿನಂತಿರುತ್ತದೆ.

| ಅ.ನಂ | ಮೂಲ ಫಲಾನುಭವಿಗಳು ವಾಸವಾಗಿರುವ ಸಂಖ್ಯೆ: | ಅನಧಿಕೃತವಾಗಿ ವಾಸವಾಗಿರುವ ಮನೆಗಳ ಸಂಖ್ಯೆ: | ಕೀಲಿ ಹಾಕಿದ ಒಟ್ಟು ಮನೆಗಳ ಸಂಖ್ಯೆ | ಬಿದ್ದ ಮನೆಗಳ ಸಂಖ್ಯೆ: |
|---|---|---|---|---|
| 1 | 288 | 316 | 441 | 03 |

ಮೇಲ್ಕಾಣಿಸಿದ ಸರ್ವೆ ವರದಿಯನ್ವಯ ನಗರ ಆಶ್ರಯ ಸಮಿತಿಯ ನಿರ್ಣಯವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು, ಜಿಲ್ಲಾಧಿಕಾರಿಗಳು ದಿನಾಂಕ:24.10.2019 ರ ಪತ್ರದಲ್ಲಿ ಮಂಜೂರಾದ ಮನೆಗಳಲ್ಲಿ ಮೂಲ ಫಲಾನುಭವಿಗಳು ವಾಸಿಸುತ್ತಿಲ್ಲವೆಂದು ಮತ್ತು ಕೀಲಿ ಹಾಕಿರುವ ಮನೆಗಳ ಫಲಾನುಭವಿಗಳಿಗೆ ನೋಟೀಸ್ ಜಾರಿ ಮಾಡಿರುವುದಾಗಿ ಹಾಗೂ ಅನಧಿಕೃತವಾಗಿ ವಾಸವಿರುವವರನ್ನು ದಿನಾಂಕ:27.08.2018ರ ನಗರ ಆಶ್ರಯ ಸಮಿತಿ ಸಭೆಯಲ್ಲಿ ಅಧಿಕೃತಗೊಳಿಸಿರುವುದಾಗಿ ನಗರ ಆಶ್ರಯ ಸಮಿತಿ ಸಭೆಯಲ್ಲಿ ಅಂತಿಮಗೊಂಡ

ಫಲಾನುಭವಿಗಳಿಗೆ ಅನುಮೋದನೆ ಕೋರಿರುತ್ತಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯುಕ್ತರ ವರದಿಯಂತೆ ಮೂಲ ಫಲಾನುಭವಿಗಳನ್ನು ನಗರ ಆಶ್ರಯ ಸಮಿತಿ ಸಭೆಯಲ್ಲಿ ಅಧಿಕೃತವಾಗಿ ರದ್ದುಗೊಳಿಸಿ ಹಾಗೂ ಮೂಲ ಫಲಾನುಭವಿಗಳ ಹಕ್ಕುಪತ್ರಗಳು ನೋಂದಣಿಯಾಗಿದ್ದಲ್ಲಿ, ಸದರಿ ನೋಂದಣಿಯನ್ನು ರದ್ದುಪಡಿಸಿ ಹಕ್ಕು ಪತ್ರಗಳನ್ನು ಹಿಂಪಡೆದು ಫಲಾನುಭವಿಗಳ ಮನೆಗಳನ್ನು ಅರ್ಹರಿಗೆ ಮರು ಹಂಚಿಕೆ ಮಾಡುವ ಕುರಿತು ನಗರ ಆಶ್ರಯ ಸಮಿತಿಯ ನಿರ್ಣಯದಂತೆ ಕ್ರಮ ಜರುಗಿಸಲಾಗುತ್ತಿದೆ.

ವಇ 127 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು